(ಇಂದು ದಿನಾಂಕ:04-06-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಎದುರುದಾರ ನಂ.3 ರವರ ಪರ ಶ್ರೀ ಎಸ್ ಎನ್ ಎಮ್ ವಕೀಲರಿಂದ.**

1. ನನಗೆ ಅಪಘಾತವಾಗಿ 6 ವರ್ಷಗಳು ಆಗಿರುತ್ತದೆ. ಅಪಘಾತದ ಬಗ್ಗೆ ದೂರನ್ನು ನನ್ನ ಮಗ ಕೊಟ್ಟಿರುತ್ತಾನೆ. ಅಪಘಾತವು ಮಧ್ಯಾಹ್ನ 1-30 ಗಂಟೆಗೆ ಆಗಿರುತ್ತದೆ. ಅಪಘಾತವಾದ ನಂತರ ನಾನು ಶಾಂತಿ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ಅದೇದಿನ ನಾನು ಪೋಲೀಸರಿಗೆ ಪಿರ್ಯಾದಿ ಸಲ್ಲಿಸಿರುವುದಿಲ್ಲ. ಅಪಘಾತ ಸ್ಥಳದಲ್ಲಿ ಎರಡು ವಾಹನಗಳನ್ನು ಪೋಲೀಸರು ಜಪ್ತಿ ಮಾಡಿರುತ್ತಾರೆ. ಪೋಲೀಸರು ಅಪಘಾತದ ದಿನ ವಿಚಾರಣೆ ಮಾಡಿಕೊಂಡು ಹೋಗಿರುತ್ತಾರೆ, ಮರುದಿನ ನನ್ನ ಮಗ ಪಿರ್ಯಾದಿಯನ್ನು ನೀಡಿರುತ್ತಾನೆ.
2. ಮೋ.ಸೈ. ಸಂಖ್ಯೆ ಕೆಎ -37 ಇಜೆ 9773 ನೇದ್ದರ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸದರಿ ವಾಹನವನ್ನು ಪೋಲೀಸರ ಜೊತೆ ಶಾಮಿಲಾಗಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಮೋ.ಸೈ. ಸಂಖ್ಯೆ ಕೆಎ -36 ಇಎ 1540 ಈ ವಾಹನದಿಂದ ಅಪಘಾತವಾಗಿದೆ ಎಂದರೆ, ಸಾಕ್ಷಿಯು ಎರಡೂ ವಾಹನಗಳು ಮುಖಾಮುಖಿ ಡಿಕ್ಕಿಯಾಗಿ ಅಪಘಾತವಾಗಿರುತ್ತದೆ ಎಂದು ನುಡಿಯುತ್ತಾರೆ. ಮೋ.ಸೈ. ಸಂಖ್ಯೆ ಕೆಎ -37 ಇಜೆ 9773 ವಾಹನ ನನಗೆ ಟಕ್ಕರ ಕೊಟ್ಟಿರುತ್ತದೆ. ಪೋಲೀಸರು ಎದುರುದಾರ ನಂ.1 ಮತ್ತು 4 ರವರ ವಿರುದ್ದ ದೋ.ಪ. ಸಲ್ಲಿಸಿರುತ್ತಾರೆ ಎಂದರೆ ಸರಿ.
3. ಅಪಘಾತದ ನಂತರ ನಾನು ಶಾಂತಿ ಆಸ್ಪತ್ರೆಯಲ್ಲಿ ಮತ್ತು ಹೆಚ್ಚಿನ ಚಿಕಿತ್ಸೆಗಾಗಿ ನವೋದಯ ಆಸ್ಪತ್ರೆ ರಾಯಚೂರಿನಲ್ಲಿ ದಾಖಲಾಗಿರುತ್ತೇನೆ. ನವೋದಯ ಆಸ್ಪತ್ರೆ ರಾಯಚೂರಿನಲ್ಲಿ ನನಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿ ನಾನು ಸಂಪೂರ್ಣ ಗುಣಮುಖನಾಗಿ ಬಿಡುಗಡೆಯಾಗಿದ್ದೇನೆ ಎಂದರೆ ಸರಿಯಲ್ಲ. ನಾನು ಈಗಲೂ ಮುಂದುವರೆದ ಚಿಕಿತ್ಸೆಯನ್ನು ಪಡೆಯುತ್ತಿರುತ್ತೇನೆ. ಚಿಕಿತ್ಸೆಗಾಗಿ ನಾನು ರೂ.2 ಲಕ್ಷ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹಾಜರಪಡಿಸಿದ ವೈದ್ಯಕೀಯ ಬಿಲ್ಲುಗಳಿಗೂ ಮತ್ತು ವೈದ್ಯರ ಸಲಹಾ ಚೀಟಿಗಳು ಹೊಂದಾಣಿಕೆ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ರೀತಿಯ ಅಂಗನ್ಯೂನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ.
4. ನಾನು ಯಾವುದೇ ರೀತಿಯ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಮನೆಯಲ್ಲಿಯೇ ವಿಶ್ರಾಂತಿ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. ನಾನು ಮೋ.ವಾಹನಗಳನ್ನು ಖರೀದಿ ಮತ್ತು ಮಾರಾಟದ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಯನ್ನು ಸಲ್ಲಿಸಿಲ್ಲ.

5. ಎದುರುದಾರ ನಂ.4 ಇವರು ಪರಿಹಾರ ಕೊಡಲು ಬಾದ್ಯಸ್ಥರು ಎಂದರೆ ಸರಿಯಲ್ಲ. ಎದುರುದಾರ ನಂ.1 ಇವರಿಗೆ ಸೂಕ್ತವಾದ ಚಾಲನಾ ಪರವಾನಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರ ನಂ.1 ಮತ್ತು 2 ರವರು ಮೋ.ವಾ. ಕಾಯ್ದೆ ಮತ್ತು ವಿಮಾ ಶರತ್ತುಗಳನ್ನು ಉಲ್ಲಂಘನೆ ಮಾಡಿದ ಕಾರಣ ಎದುರುದಾರ ನಂ.3 ಇವರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು